Doc - 540
T-P-2

ಶ್ರೀ ಗೋರಕ್ಷಣಿ
GORAKSHANA

10 ನೇ ವರ್ಷ 1959 ನೇ ಅಕ್ಟೋಬರು ತಾ|| 29 Oct 59

ಗೋ ರ ಕ್ಷ ಣೆ ಮಾ ಡಿ

ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯದ್ರವ್ಯ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

Advertise in Goraksana and help the pious cause

ವಿಳಾಸ : ಗೋರಕ್ಷಣ ಆಫೀಸ್ ಚಾಮರಾಜಪುರಂ, ಮೈಸೂರು

ಪ್ರಾಣಿವಧೆಯು ಕೇವಲ ಜಿಹ್ವಾಲಾಸೆಯಿಂದಾಗಿದೆ

(ಶ್ರೀ ಕೆ. ವೆಂಟರಾಯಾಚಾರ್ಯ, ವಿದ್ವಾನ್)

ಕಾರ್ತೀಕ ಶುಕ್ಲ ಅಷ್ಟಮಿಯು ಗೋಪಾಷ್ಟಮಿಯೆಂದು ಉತ್ತರ ಭಾರತದಲ್ಲಿ ಸುಪ್ರಸಿದ್ಧವಿದೆ; ಕಾರ್ತೀಕ ಶುಕ್ಲ ಪ್ರತಿಪದೆಯು ಗೋಪೂಜಾ ದಿನವೆಂದು ಧರ್ಮಶಾಸ್ತ್ರದಲ್ಲಿದ್ದುದು ಮಾತ್ರವಲ್ಲದೆ ನಮ್ಮಲ್ಲಿ ಆಚರಣೆಯಲ್ಲೂ ಇದೆ; ಇನ್ನೀಗಾ ಪಕ್ಷದಲ್ಲಿ ಗೋವುಗಳ ವಧೆಯು ನಿಶೇಧವು ಎಲ್ಲೆಡೆ— ರಾಜಕೀಯ ಭೇದವಿಲ್ಲದೆ— ಆಚರಿಸಕ್ಕ ವಿಷಯವಾಗಿದೆ; ಗೋವುಗಳು ವಿಶ್ವದ ಯೋಗಕ್ಷೇಮಗಳಿಂದು ವೈದಿಕ ಹಾಗೂ ಪೌರಾಣಿಕವಾಗಿ ಕಾಣುವುದು; ವಿಂಡೂಪ ಗೋವು ಪ್ರಮುಖ ದೇವತೆಗಳ ಅವಾಸಸ್ಥಾನವೆಂದು; ಅದ್ದರಿಂ ಪಾಲನೆಯು ಸ್ವರ್ಗ-ಹಿತಕರವೆಂದು ಸಾರುವುದಕ್ಕೆ ಹಿನ್ನೆಲೆಯಾಗಿ, ಅಲ್ಲಿ ಸಾರಲಾಗಿದೆ; ಮೃತನ ಹಾಗೂ ಧರ್ಮರಾಯನ ಕತೆಗಳಲ್ಲಿ ಗೋವಿನ ರಕ್ಷಣೆಯು ಮುಖ್ಯತಃ ಳೆದಿರುತ್ತಿದೆ.

ಅಹಿಂಸಾ ಪ್ರಾಧಾನ್ಯವುಳ್ಳ ಜೈನ, ಬೌದ್ಧ ಮತಗಳಲ್ಲಿ ಸರ್ವಪ್ರಾಣಿಗಳ ಯೂ ವಿಶೇಷವಾಗಿದೆ: ಬೌದ್ಧಮತದ ವಿಶೇಷ ಪ್ರಚಾರಕ ಹಾಗೂ ಸರುಗೊಂಡ ಅಶೋಕನು ತನ್ನ ಶಿಲಾಸ್ತಂಭವೊಂದರಲ್ಲಿ ಕ್ಷರಗಳಿಲ್ಲದೆ ಕೇವಲ ಕೆತ್ತನೆಯಾಗಿ). ಕೆತ್ತಿಸಿದ ವೃಷಭನ ಲ್ಲಿ ಕಾಣಬಹುದು: ಈ ಸ್ತಂಭವು ಡಿಲ್ಲಿಯ ಪ್ರದರ್ಶನಾಲಯಕ್ಕೆ ಂಸಲಾಗಿದೆಯೆಂದು — ಕೇಂದ್ರದ ಪ್ರಕಟಣೆಯೊಂದರಲ್ಲಿ — ಶೋಕನೆ ಶಾಸನಗಳೆಂಬುದರಲ್ಲಿ — ಹೇಳಿದೆ?

ಅಶೋಕನು ಶತಸಹಸ್ರ ಪ್ರಾಣಿಗಳನ್ನು ಆ ನೊದಲು ಕಡಿಸುತ್ತಿದ್ದನು: ಅನೇಲೆ ಮೂರು ಪ್ರಾಣಿಗಳು ಬಂದವು; ಒಂದನೆ ಶಿಲಾಶಾಸನವನ್ನು ಬರೆಯಿ ತ್ತಾ, ಇನ್ನು ಅದಾಷ್ಟದೂ— ಪ್ರಾಣಿಯಾಗಲಿ, ಪಕ್ಷಿಯಾಗಲಿ, ಅವಧ್ಯವೆಂ ಪಸರಿಸಿದ್ದಾನೆ!

ಅಶೋಕನು ಬರೆಸಿದ ಎಡೆಡನೆಯ ಶಿಲಾಸ್ತಂಭದಲ್ಲಿ ಹೇಳಿದಂತೆ ಮನುಷ್ಯ ಪಶುಗಳ ಚಿಕಿತ್ಸೆಗಾಗಿ ಆಲಯಗಳನ್ನೂ ಔಷಧೀ ಸಸ್ಯಗಳನ್ನು ಸೆಡಿಸು ಮಾಡಿಸಿದ್ದನು: ಈ ಕ್ರಮವು ತನ್ನ ಆಡಳಿತೆಯ ಸುಶ್ರೂಷಣ (ಪ್ರಾಂತ್ಯದ) ರೆಲ್ಲೂ ನೆಲೆಸುವಂತೆ ಜನರನ್ನು ಅಲ್ಲಿಗೆಲ್ಲಾ ಕಳುಹಿಸಿದ್ದನು; ಅಶೋಕನು ಬರೆ ದ ಧರ್ಮಶಾಸನವನ್ನು ನಮ್ಮ ಭಾರತೀಯ— ಧ್ವಜದಲ್ಲಿ ಇರಿಸಿಕೊಂಡಿದ್ದೇವೆ; ಾದರೆ ಅತನು ಸಾರಿದ ಪ್ರಾಣಿವಧೆಯ ನಿಷೇಧವು ನಮಗೆ ಅನುಸರಣೀ ವೇ?

ವುಗಳ ಸಂರಕ್ಷಣೆ ಹಾಗೂ ವಧನಿಷೇಧವು ಭಾರತದ ಸ್ವಾತಂತ್ರ್ಯ ಾಪನೆ ಗಾಂಧೀಜೀಯವರಿಗೂ ಒಪ್ಪಿಕವಿತ್ತೆಂದು 'ಯಂಗ್ ಇಂಡಿಯಾ' ರು ಬರೆಹದಿಂದ ತಿಳಿಯುವುದು (1921 ನೇ ಅಕ್ಟೋಬರು 6 ನೇ ತಾರೀ ಹೆಡ ನೋಡಿರಿ) ಬಡನರು ತುಂಬಿರುವ ನಮ್ಮೀ ಭಾರತದಲ್ಲಿ ಈ ಧನಿಕರಿಂದಲೇ ಅದ್ಭುತವಾಗದಿದ್ದರೆ, ಈ ವಿಷಯದ ವಿಚಾರವೇನೆನ್ನಲಿ? ನಂಥ ಗಾಂಧೀಜೀ ತತ್ವಾನುಷ್ಠಾನ ಸಂಪನ್ನರಾದ ನಾವು ಈ ಬಗೆಯ ಸಂಕೋಚ ಹಾಗೂ ವಿಲಂಬನವನ್ನು ಮಾಡಿದರೆ ನಮಗೆಲ್ಲಾ ನಿಂದಾಸ್ಪದ ಂಗತಿಯಾಗದೆ!

ಹಿಂದೂಜನರೇ ಇಲ್ಲಿ ಹೆಚ್ಚಾಗಿ ಇದ್ದೇವೆ ಆ ವೇರೆಗೆ ಭಾರತದಲ್ಲಿ ಗಳಲ್ಲೇ ಹೆಚ್ಚು ಲೆಕ್ಕದಲ್ಲಿ ಗೋವುಗಳಿವೆಯೆಂದರೆ ತಪ್ಪಾಗದು. ಹಿಂದು ತಮ್ಮ ಗೋವುಗಳನ್ನು ಮಾರದಿದ್ದರೆ, ಮಾರದಿರುವಂತೆ ಹಿತ ಮನಸ್ಸು ಅವುಗಳ ವಧೆಯು ತಾನಾಗಿ ನಿಲ್ಲಲು ಹೆಚ್ಚು ಕಾಲ ಬೇಕಾಗದು!

ಊರವರು ನಮ್ಮಲ್ಲಿದ್ದ ಜನಕ್ಕೆ ಮೇವಿಗೆ ಜಾಗವಿಲ್ಲವೆನ್ನುತ್ತಾರೆ. ಇದು ರಾಜಕೀಯ ಪ್ರಧಾನಿಗಳು ಗಮನಿಸತಕ್ಕ ವಿಷಯವಾಗಿದೆ. ಪ್ರತಿಯೊಂದು ಗ್ರಾಮದಲ್ಲಿ – ಗ್ರಾಮಾಂತರಂಗಳಲ್ಲಿ – ಗೋಚರಾವು ಸ್ಥಳಗಳೆಂದು ಏನಾ ಗೊಳಿಸದ (ವಿಾಸಲಿಟ್ಟ) — ಹಾಗೂ ಊರ ಗದ್ದೆ ಸಾಗುವಳಿಗೆ ತಕ್ಕ ಸೌವ್ಯ ಸಾದಿಗಳಿಗೆಂದು ಪ್ರತ್ಯೇಕಿಸಿಟ್ಟ – ಸ್ಥಲಗಳನ್ನು ಎಕ್ಕೆಗಟ್ಟಲೆಯಾಗಿ ಪಂತ್ರಸ್ಥರಿಗೆ ಹಾಗೂ ಪರಿಶ್ರಾಂತರಿಗೆ ಕೊಡಿಸುವ ಕ್ರಮವು ಒತ್ತಡದಿಂದ ನಿಲ್ಲಿಸಲಾಗ ಬೇಕು. ಹಾಗೂ ಕೃತಕ ಗರ್ಭದಾನದ ಪ್ರಚಾರಕ್ಕೆ ಆ ಗೋವುಗಳ ರಕ್ಷಣೆಗೆ ಕೊಡುತ್ತಿರುವ ಸೌಕರ್ಯವು ಪ್ರತಿಯೊಬ್ಬ ಗೋರಕ್ಷಕನಿಗೆ ಅಗತ್ಯವಾಗಿ ಸಿಗುವಂತಾಗಬೇಕು. ಇದರಿಂದ ಊರಲ್ಲಿ ಇದ್ದ ಗೋವುಗಳು ಊರವರ ಕೈ ಬಿಟ್ಟು ಹೋಗದಂತಾದೀತೆಂದು ಳಕಳಿಯಿಂದ ವಿನ್ನವಿಸುತ್ತೇವೆ.

ಅನುಪಯೋಗಿ ಗೋವುಗಳ ರಕ್ಷಣೆಯು ಹೇಗೆ ಮತ್ತು ಏಕೆಂದು ಪ್ರಶ್ನೆ ಬರುವುದು ಅದಂ ಅಹಾರಾದಿ ವ್ಯಯವು ಅದರ ಗಂಜಳ ಇತ್ಯಾದಿಗಳಿಂದ ದೊರೆಯುವುದೆಂದು ಸಾಧಾರಣವಾಗಿ ಇದೊಂದು ಚಿಕ್ಕ ವುಸ್ತಕೆಯಲ್ಲಿ ವಿವರ್ಶಿಸಲಾಗಿದೆ (ಹಂತಕರ ಕೈಯಲ್ಲಿ ಗೋವು)

ಈ ಬಗೆಗೆ ಜನರಲ್ಲಿ ಸಚೇತನಾತ್ಮಕ ಜಾಗವಳಿಯಾದರೆ ರಾಜ್ಯ ಕಾರ್ಯವಾಹಕರು ತಕ್ಕ ಸುವ್ಯವಸ್ಥೆಗೊಳಿಸುವರೆಂದು ಉತ್ತರ ಭಾರತದ ಕೆಲವು ಪ್ರಾಂತ್ಯಗಳಲ್ಲಿರುವ ಗೋವಧ ನಿರೋಧಪರ ನಿಯಮಗಳಿಂದ ತಿಳಿಯುವುದು. ಹಾಗಿಲ್ಲವಾದರೆ, ಯಥಾಪೂರ್ವದಂತೆ ಗೋವುಗಳ ಹತ್ಯೆಯು ಸಾಗುತ್ತಲೇ ಇರುತ್ತದೆ

ಆ ವೇರೆಗೆ ನಾವು — ಭಾರತೀಯರು — ಈ ಬಗ್ಗೆ ತೀಕ್ಷ್ಣವಾಗಿ ಎಚ್ಚರವಾಗಬೇಕಾಗಿದೆ.

ಇಸ್ಲಾಂ ಮತದಂತೆ ರಾಜಕೀಯ ನಿಯಮಾವಳಿಯನ್ನು ನಿರ್ವಿಸಿದ ಪ್ರಾಚೀನ ಪದ್ಧತಿಯೊಂದನ್ನು ಪರಿಶೀಲಿಸಿದರೆ ಮೂಕ ಪ್ರಾಣಿಗಳು ಹಾಗೂ ಅನಾಥ ಮಾನವರ ರಕ್ಷಣೆಗಾಗಿ ಪ್ರತ್ಯೇಕ ಅಧಿಕಾರಿಯೊಬ್ಬನ ನೇಮಕವಿತ್ತೆಂದು ತಿಳಿಯುವುದು (ಇಸ್ಲಾಂ ಸಂಸ್ಕೃತಿ – ಮೈಸೂರು ವಿಶ್ವವಿದ್ಯಾಲಯದ ಪ್ರಕಟಣೆ). ಅಂದ ಮೇಲೆ, ಗೋವುಗಳ ಮೇಲೆ ಇಸ್ಲಾಂ ಸಂಸ್ಕೃತಿಯವರ ದಯಾಭಿವೀಕ್ಷಣವೇನೆಂದು ಪ್ರತ್ಯೇಕ ಹೇಳಬೇಕಾಗಿಲ್ಲ.

ಪ್ರಾಣಿವಧೆಯು ಕೇವಲ ಜಿಹ್ವಾಲಾಲಸೆಯಿಂದಾಗಿ ಹಾಗೂ ಧನಾದಾಯದ್ದಾಗಿರುವುದರಿಂದ ನಿಷೇಧವಾದರೆ ಜನಜೀವನಕ್ಕೇನೂ ಅಡ್ಡಿಯಾಗದು. ಗೋವಧ ನಿರೋಧ ನಿಯಮವು ಸ್ವಾಗತಾರ್ಹವಿದೆ — ಮಂಗಳೂರು 'ಪ್ರಭಾತ'

ಮಹಾತಾಯಿ ಗೋಮಾತೆ

[ಲೇಖಕರು— ಶ್ರೀ ಕೆ. ಪರಮೇಶಭಟ್ಟರು, ತುಂಬಿಹಕ್ಕಲು]

ಗೋವೇ ನಮ್ಮ ಮಹಾತಾಯಿ. ಹುಟ್ಟಿದಂದಿನಿಂದ ಹೊಂದುವ ವರೆಗೆ ಅ ಮೃತ ಸಮಾನವಾದ ಹಾಲನ್ನು ಕೊಟ್ಟು ನಮ್ಮನ್ನು ಕಾಪಾಡುವ ಚಿರಋಣಿಯಾದ ಮಹಾತಾಯಿ ಈ ಮಹಾತಾಯಿಯ ಋಣದಲ್ಲಿ ಬಿದ್ದ ನಮ್ಮ ಜನ್ಮ ಜನ್ಮಕ್ಕೂ ಅಸಾಧ್ಯವಾದುದು. ನಮ್ಮ ಹಿಂದೂಸ್ಥಾನವಲ್ಲದೆ ಇತರ ಪಾಶ್ಚಾತ್ಯ ದೇಶಗಳಲ್ಲೂ ಪವಿತ್ರ ಸ್ಥಾನ ವಿದೆ. ಅಲ್ಲದೆ ಗೋಮಾತೆಯು ಕೇವಲ ದನಗಳಲ್ಲ. ನಮ್ಮ ದಾಸ್ಯವೃತ್ತಿಗೆ ಜನಿಸಿರುವುದಲ್ಲ ದೇವತೆಗಳೆಲ್ಲ ಒಂದುಗೂಡಿ ಗೋವಿನ ರೂಪ ತಾಳಿ ಇಳೆಯನ್ನು ಸಂರಕ್ಷಿಸುವ ಮಹಾತಾಯಿ. ಜನ್ಮ ಕೊಟ್ಟ ತಾಯಿಕಂತಲೂ ಎಷ್ಟೋ ಅಧಿಕ ತಾಯಿ. ಇಂತಹ ಪವಿತ್ರವಾದ ಅತ್ಯಂತ ಉಪಕಾರಿಯಾದ ಮಹಾತಾಯಿಯ ಸೇವೆ ಮಾಡಿ ಇಹದಲ್ಲಿ ಸುಖಸೌಖ್ಯಗಳ

ನ್ನೂ ಪರದಲ್ಲಿ ಪರಮ ಪದವಿಯನ್ನೂ ಪಡೆಯಲಿ ನಮ್ಮ ಭಾರತೀಯರೆಲ್ಲರಿಗೂ ಒನ್ಮೆಲೇ ಜ್ಞಾನೋದಯವಾಯಿತೆಂದರೆ ಪವಿತ್ರವಾದುದು ಯಾವುದು ಅಪವಿತ್ರ ವಾದುದಾವುದು ಎಂದರಿತರೆ ಕಣ್ಣಿಗೆ ಇಳೆಯು ಸ್ವರ್ಗವಾಗುವುದು ಖಂಡಿತ.

ಗೋಮಾತೆಯ ಉಪಕಾರ — ಭೂಮಿಯಲ್ಲಿ ಗೋಮಾತೆಯನ್ನು ಉಪಕಾರಿಯಾದವರು ಯಾರೂಇಲ್ಲ ನಮಗೆ ಉತ್ತಮ ಶಕ್ತಿಯುತವಾದ ಅಮೃತ ಸವ ನಾದ ಕ್ಷೀರ, ಅದರಿಂದಾಗುವ ಮೊಸರು ಬೆಣ್ಣೆ ತುಪ್ಪಗಳನ್ನು ಕೊಡುವುದು ಗೋಮಾತೆಯಲ್ಲವೆ ? ಬೇಸಾಯಕ್ಕೆ ಮುಖ್ಯವಾದ ಬಸವಣ್ಣಗಳು ಗೋ ಸಂಭೂತವಲ್ಲವೇ ? ಭೂಮಿಯನ್ನು ನಗಿಸಿ ನಲಿಯುವಂತೆ ಮಾಡುವದು ಗೋಮಾತೆಯ ಮಲಮೂತ್ರಗಳಿಂದಲ್ಲವೇ ಬೇಸಾಯಗಾರರಿಗಂತೂ ಗೋವು ಅತಿ ಮುಖವಾದುದಲ್ಲವೇ. ಗೋವು ಬಡ ಕಾಲು, ಮುದಿಯಾಗಿ ಸತ್ತಮೇಲಾದರೂ ಕೆಲಸಕ್ಕೆ ಬಾರದೆ ಇರತಕ್ಕದ್ದೀನಾದರೂ ಇದೆ — ೀ ? ಜನ್ಮದಿಂದ ಮನುಷ್ಯರಿಗ ಬೇಕಾಗುವ ಎಷ್ಟೋ ವಸ್ತುಗಳಾಗುತ್ತವೆ. ಕೊಂಬಿನಿಂದ ಬಾಚಣಿಗೆ ಗುಂಡಿ ಮತ್ತು ನಶ್ಯದ ಡಬ್ಬಿಗಳಾಗುತ್ತವೆ. ಎಲುಬಿನೀದ ಅತ್ಯಂತ ಸಾರವಾದ ಗೊಬ್ಬರ ತಯಾರಿಸುತ್ತಾರೆ. ಅಲ್ಲದೆ ಗೋರೋಜನವೆಂಬ ಉತ್ತಮ ಔಷಧಿ ಪಸ್ತುವು ಸಿಕ್ಕುತ್ತದೆ. ಅದುದರಿಂದ ಜನರು ಈ ರೀತಿಯಾದ ಉಪಯೋಗ ಹೊಂದುತ್ತಿದ್ದರೂ ಸಹ ಜನಗಳಿಗೆ ಇನ್ನೂ ಕೊಂಚವೂ ಎಚ್ಚರಿಕೆ ಬಂದಿಲ್ಲ. ಮುಂದಾದರೂ ಗೋವಿನ ವಿಷಯದಲ್ಲಿ ಪ್ರೀತ್ಯಾದರಗಳನ್ನು ವಹಿಸಿ ಗೋಸಂತತಿಯನ್ನು ಅಭಿವೃದ್ಧಿಗೊಳಿಸಿ ದಲ್ಲಿ ಧನಧಾನ್ಯಾಭಿವೃದ್ಧಿಯೊಂದಿ ಸುಖ ಸಂತೋಷದಿಂದ ಬಾಳಬಹುದು. ಗೋವಿನ ಅಕ್ಷಯವು ಭೂಮಿಗೆ ಬೀಳಬಾರದು ಅಲ್ಲದೆ ಒಂದು ಹನಿ ರಕ್ತವು ಬಿದ್ದರೆ ಜನರಿಗೆ ಮತ್ತು ದೇಶಕ್ಕೆ ಮಹಾ ಹಾನಿಯಾಗುವದು ವಿನಾಶಕಾಲಕ್ಕೆ ವಿಪರೀತ ಬುದ್ಧಿ ಎಂಬ ಅಂತಹ ವಿಪರೀತ ಬುದ್ಧಿಗೆ ಎಡೆಗೊಡದೆ ಸುಬುದ್ಧಿಯನ್ನು ಹೊಂದಿ ಸತ್ಮಾರ್ಗದಲ್ಲಿ ನಡೆದರೆ ನಾವು ಸುಖಹೊಂದಿ ದೇಶೋದ್ಧಾರವಾಗುವದು ಶತಸ್ಸಿದ್ಧ

ಆದರೆ ಇದು ರಾಮರಾಜ್ಯ ಈ ರಾಮರಾಜ್ಯದಲ್ಲಿ ಗೋವು ಮತ್ತು ಪ್ರಾಣಿವಧೆ ಎಂದರೆ ವಿನಾಶ್ಚರ್ಯ ಪ್ರಾಣಿವಧಾ ಎಂದ ಮಾತ್ರಕ್ಕೆ ಜನರು ಎಣಿಕೆಗೆ ಬಾರದಷ್ಟು ಪಾಪರಾಶಿಗಳು ದೆನ್ನುಹಚ್ಚು ತ್ತವೆ ಪಾಪಕ್ಕೂ ಪುಣ್ಯಕ್ಕೂ ತುಂಬಾ ವೆತ್ಯಾಸವಿರುತ್ತದೆ ಈಗ ನೋಡಿ. ಸೀಮೆಎಣ್ಣೆ ಪಾಪ ಅಂತ ಭಾವಿಸಿ, ತುಪ್ಪ ಪುಣ್ಯ ಅಂತ ಇಟ್ಟುಕೊಂಡು ಆ ತುಪ್ಪಕ್ಕೆ ಒಂದು ಚಮಚ ಸೀಮೆಎಣ್ಣೆ ಹಾಕಿದರೆ ಅದೆಲ್ಲಾ ಸೀಮೆಎಣ್ಣೆ ಪಾಪವೆ ಯಾಗುತ್ತೆ : ಆಡೇ ತುಪ್ಪವನ್ನು ಸೀಮೆ ಎಣ್ಣೆಗೆ ಸುರಿದರೆ ಎಂದಾದರೂ ತುಪ್ಪವಾಗಲಾರದು : ಅಂತೆಯೇ ಪುಣ್ಯ ಸಂಪಾದನೆ ಮಾಡುವುದು ತುಂಬಾ ಕಷ್ಟ, ಆದರೆ ಪಾಪ ಸಂಪಾದನೆ ಮಾಡುವುದು ಅತಿ ಸುಲಭ

ಈ ಲೋಕದಲ್ಲಿ ದೇವರು ನಾನಾ ರೀತಿಯಿಂದ ನಾನಾ ಶಂನಾದ ಜೀವರಾಶಿಯನ್ನು ಸೃಷ್ಟಿಸಿದ್ದಾನೆ : ಆದರೆ ಅದರ ಅದಂ ಪೈಕಿ ಮಾನವನಿಗೆ ಪ್ರಥಮ ಸ್ಥಾನವನ್ನೂ, ಹೆಚ್ಚು ಬುದ್ಧಿಶಕ್ತಿಯನ್ನೂ ಕೊಟ್ಟಿರುತ್ತಾನೆ : ಬೇರೆ ಜೀವರಾಶಿಗಳನ್ನು ಮಾನವನಿಗೆ ತಿನ್ನಲಿಕ್ಕೆಂದೂ ಸೃಷ್ಟಿಸಿಲ್ಲ : ಮಾನವನನ್ನೂ ರಕ್ಕಮಾಂಸಗಳಿಂದ ಸೃಷ್ಟಿಸಲಾಗಿದೆ : ಹಾಗಿದ್ದರೂ ಕೂಡ ಮಾಂಸಾಹಾರ ಮಾಡ ವುದು ಹಿತಕರವಾದುದಲ್ಲ : "ಹಿಂಸೆಯಪರಮೋಧರ್ಮಃ ಎಂಬುದನ್ನು ಸದಾ ಜಾಗ್ರತರಾಗಿರುವುದು ಬಿಟ್ಟು, ಮತ್ತೂಮತ್ತೂ ಪಾಪಕೂಪಕ್ಕೆಳೆಯುವುದೇನಾಶ್ಚರ್ಯ : ಅಹಿಂಸಾವ್ರತಾಸಕ್ತರಾಗಿ ಸಕಲರ ಮನಸ್ಸೂ ಒಂದೇ ಆದರೆ ಅಂದೇ ನಮ್ಮ ರಾಜ್ಯವೆ ಹಿಂದಿನ ರಾಮರಾಜ್ಯಕ್ಕಿಂತಲೂ ಮಿಗಿಲಾಗುವುದರಲ್ಲಿ ಸಂಶಯವೇ ಇಲ್ಲ

ಗೋವು ಮತ್ತು ಎತ್ತುಗಳಲ್ಲಿ ಹಗಲು ರಾತ್ರಿ ಎನ್ನದೆ ದುಡಿಸಿಕೊಂಡು, ಮುದಿಯಾದಾಗ ಅಗವುಳನ್ನು ಪ್ರೀತಿಯಿಂದ ಕಾಪಾಡುವುದು ಬಿಟ್ಟು, ಅವುಗಳನ್ನು ಅರೆಕಾಸಿಗೆ ಕಟುಕರಿಗೆ ಮಾರುತ್ತಿರುವುದು ತುಂಬಾ ವಿಶಾದಕರ : ಅಂತವರಿಗೆ ಕುಂಭೀಪಾಕ ನರಕವು ಖಡಾಖಂಡಿತವಾದ ಮಾತು

ಮಹಾಮಹಿಮನಾದ ಶ್ರೀ ಕೃಷ್ಣ ಪರಮಾತ್ಮನೇ ಗೋವುಗಳನ್ನು ಪಾಲಿಸಿ ಗೋಪಾಲಕೃಷ್ಣನಾಗಿದ್ದಾನೆ.

ನಮ್ಮ ಭಾರತೀಯರೆಲ್ಲರೂ ಸಹೋದರ ಬಾಂಧವ್ಯದಿಂದ ಒಂದು ಗೂಡಿ ಸತ್ಯಸಂಧರಾಗಿ ನ್ಯಾಯಮಾರ್ಗಿಗಳಾಗಿ ಸನ್ಮಾರ್ಗದಲ್ಲಿ ನಡೆದು, ಪಶುಪಕ್ಷಿಣಿಗಳಲ್ಲಿ ದಯೆದೋರಿ ಸತ್ಕೀರ್ತಿವಂತರಾಗಿ ಸದಾ ಸುಖದಿಂದ ಬಾಳಲಿ

ವುಡ್‌ಲಾಂಡ್ 30—10—59 ರಿಂದ
ಡಿ ಲಕ್ಸ್ ವೈಭವ ಪ್ರಾರಂಭ

— ದೀಪಾವಳಿಯ ವಿಶೇಷ ಆಕರ್ಷಣೆ —

ಅಭಿನಯ ಕೌಶಲ್ಯದಿಂದ ಕೂಡಿದ ಸಂಗೀತಮಯ ಸುಂದರ ಹಿಂದಿ ಚಿತ್ರರತ್ನ

ಮೈನಸೇಮೇಹೂ (ಹಿಂದಿ)

ಪಾತ್ರ— ರಾಜ್ ಕಪೂರ್ — ಮಾಲಾ ಸಿನ್ಹ

ಸಂಗೀತ— ಶಂಕರ್ ಜೈಕಿಷನ್ — ದಿನವಹಿ 3 ಪ್ರದರ್ಶನಗಳು

ಅಪೆರಾ— 30—10—59 ರಿಂದ
ಅಮೋಘ ಆರಂಭ

— ವರ್ಣರಂಜಿತ ಚಿತ್ರ —

ಜಿಂಬೊ — JIMBO

ಚಿತ್ರ — ಅಜಾದ್ — ಪೆಡ್ರೊ (ಏಪ್ ಬಾಂಬ್)

— ದಿನ 3 ಆಟಗಳು —

ಗೋರಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ



SHAKTI
SUDHA

A Superb Tonic

For Quality Printing ಎಲ್ಲ ವಿಧದ ಅಚ್ಚುಕೆಲಸದ ಔ
L. N. Press ಅ ಶೋ ಕ ಪ್ರಾ
Sivarampet, Mysore ಲ್ಯಾನ್ಸ್‌ಡೌನ್ ಬಜಾರ್ ಮೈ

Edited, Printed & Published by Dharma Prachara Nur
Krishna Rao, at the Satyavadi Press, Chamarajapuram M